# ಸಾಹಿತಿ, ಸಮಾಜಸೇವಕಿ ಎ. ಪಂಕಜ ನಿಧನ

ವಿ.ವಾ. 15-12-20

## ಸಾಹಿತ್ಯ ಲೋಕದಿಂದ ಬಹುಮುಖ ಪ್ರತಿಭೆ ಕಣ್ಮರೆ । 50ಕ್ಕೂ ಹೆಚ್ಚು ಕಾದಂಬರಿ ರಚನೆ

**ಬೆಂಗಳೂರು:** 50ಕ್ಕೂ ಹೆಚ್ಚು ಕಾದಂಬರಿಗಳ ರಚಿಸಿ, ಹಲವು ಭಾಷೆಗಳಿಂದ ಮೌಲಿಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದ ಹಿರಿಯ ಸಾಹಿತಿ, ಸಮಾಜ ಸೇವಕಿ ಎ. ಪಂಕಜ (88) ನಿಧನರಾಗಿದ್ದಾರೆ. ಪತಿ ಅಗಲಿಕೆ ನಂತರ ನಗರದ ಬನ್ನೇರುಘಟ್ಟ ರಸ್ತೆಯ ವಿಜಯಾ ಬ್ಯಾಂಕ್ ಲೇಔಟ್‌ನಲ್ಲಿ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಾಗಿದ್ದ ಅವರು, ಐದಾರು ತಿಂಗಳಿಂದ ಅನಾರೋಗ್ಯಪೀಡಿತರಾಗಿದ್ದರು.



ಪಾವಗಡ ತಾಲೂಕಿನಲ್ಲಿ ಜನಿಸಿದ ಪಂಕಜ, ಸ್ವಾತಂತ್ರ್ಯ ಹೋರಾಟಕ್ಕೆ ಸಾಕ್ಷಿಯಾಗಿ ಶಾಲಾ ವಿದ್ಯಾರ್ಥಿನಿಯಾಗಿದ್ದಾಗಲೇ ಹಲವು ಪದ್ಯ ಬರೆದು ಅಕ್ಷರ ಕೃಷಿ ಆರಂಭಿಸಿದ್ದರು. ಸಾಹಿತ್ಯ ಸೇವೆಗಾಗಿ ಬಿ. ಸರೋಜಾದೇವಿ, ಗಳಗನಾಥ, ಅತ್ತಿಮಬ್ಬೆ, ಕರ್ನಾಟಕ ಸಾಹಿತ್ಯ ರತ್ನ, ಕೆಂಪೇಗೌಡ ಹಾಗೂ ಕೇಂದ್ರ ಸರ್ಕಾರದ ಭಾಷಾ ಪ್ರಶಸ್ತಿಗೆ ಭಾಜನರಾಗಿದ್ದರು. ಬೆಂಗಳೂರು ನಗರ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಗೌರವ ಪಡೆದಿದ್ದರು. ಬೆಂಗಳೂರು ಎಜುಕೇಷನ್ ಸೊಸೈಟಿ, ಸೋಫಿಯಾ ಹೈಸ್ಕೂಲುಗಳಲ್ಲಿ ಉಪನ್ಯಾಸಕಿಯಾಗಿ, ನಂತರ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಉದ್ಯೋಗಿಯಾಗಿ ಪಂಕಜ ಸೇವೆ ಸಲ್ಲಿಸಿದ್ದರು.

1979ರಲ್ಲಿ ಮಲ್ಲೇಶ್ವರದಲ್ಲಿ ಶೇ.80 ಮಹಿಳಾ ಷೇರುದಾರರನ್ನು ಒಳಗೊಂಡ ಮಹಿಳಾ ಬ್ಯಾಂಕ್ ಪ್ರಾರಂಭಿಸಿದರು. ಹೋಲಿಗೆ ಯಂತ್ರ, ಕುಕ್ಕರ್, ಮಕ್ಕಳ ಫೀ, ಮನೆ ರಿಪೇರಿ, ಊದುಬತ್ತಿ ತಯಾರಿಕೆಯಂತಹ ಗೃಹ ಕೈಗಾರಿಕೆಗೆ ಸಾಲ ನೀಡಿ ಸ್ವಾವಲಂಬಿಗಳಾಗಿ ಬದುಕುವ ಮಾರ್ಗ ತೋರಿಸಿಕೊಟ್ಟಿದ್ದಾರೆ. ಇದೀಗ ಬ್ಯಾಂಕ್ 9 ಶಾಖೆಗಳಲ್ಲಿ 15 ಸಾವಿರ ಸದಸ್ಯರನ್ನು ಹೊಂದಿದ್ದು, 180 ಕೋಟಿ ರೂ. ವ್ಯವಹಾರ ನಡೆಸುತ್ತಿದೆ.

### ಮುಖ್ಯಮಂತ್ರಿ ಸಂತಾಪ

**ಹಿರಿಯ ಸಾಹಿತಿ ಎಂ. ಪಂಕಜ ನಿಧನದಿಂದ ಬಹುಮುಖಿ ಪ್ರತಿಭೆಯೊಂದನ್ನು ಕಳೆದು ಕೊಂಡಂತಾಗಿದೆ. ಭಗವಂತನು ಅವರ ಆತ್ಮಕ್ಕೆ ಶಾಂತಿ ನೀಡಲಿ ಹಾಗೂ ಅವರ ಕುಟುಂಬದವರಿಗೆ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಸಿಎಂ ಬಿ.ಎಸ್. ಯಡಿಯೂರಪ್ಪ ಸಂತಾಪ ಸೂಚಿಸಿದ್ದಾರೆ.**